Akashvani: Bangalore
National Bulletin In Kannada
21.10.2025 : 19.35hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಜಾಗತಿಕ ಬಿಕ್ಕಟ್ಟಿನ ಸಮಯದಲ್ಲಿ, ಸ್ಥಿರತೆ ಮತ್ತು ಸಂವೇದನೆಯ ಸಂಕೇತವಾದ ಭಾರತ - ಪ್ರಧಾನಿ ನರೇಂದ್ರ ಮೋದಿ
- ಬಾಹ್ಯ ಮತ್ತು ಆಂತರಿಕ ಭದ್ರತೆಯನ್ನು ಸಮತೋಲನದಲ್ಲಿಡುವುದು ಅತ್ಯಗತ್ಯ - ರಕ್ಷಣಾ ಸಚಿವ ರಾಜನಾಥ್ ಸಿಂಗ್
- ದೀಪಾವಳಿಯ ಸಂದರ್ಭದಲ್ಲಿ ಐದೂವರೆ ಲಕ್ಷ ಕೋಟಿ ರೂಪಾಯಿ ಮೀರಿದ ದಾಖಲೆಯ ಸರಕು ವಹಿವಾಟು
- ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ತಕೈಚಿ ಸನೇ ಆಯ್ಕೆ; ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ
- ಫಿಡೆ ಚೆಸ್ ವಿಶ್ವಕಪ್ ೨೦೨೫; ಗೋವಾದಲ್ಲಿ ಅಧಿಕೃತ ಲಾಂಛನ, ಗೀತೆ ಬಿಡುಗಡೆ

><><><><

ಜಗತ್ತು ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಈ ಸಮಯದಲ್ಲಿ ಭಾರತ ಸ್ಥಿರತೆ ಮತ್ತು ಸಂವೇದನೆಯ ಸಂಕೇತವಾಗಿ ಹೊರಹೊಮ್ಮಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ದೀಪಾವಳಿಯ ಸಂದರ್ಭದಲ್ಲಿ ದೇಶದ ನಾಗರಿಕರಿಗೆ ಬರೆದ ಪತ್ರದಲ್ಲಿ ಅವರು, ಮುಂದಿನ ದಿನಗಳಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ವಿಕಸಿತ ಮತ್ತು ಸ್ವಾವಲಂಬಿ ಭಾರತದ ಈ ಪಯಣದಲ್ಲಿ, ರಾಷ್ಟ್ರದ ಪರವಾಗಿ ತಮ್ಮ ಕರ್ತವ್ಯಗಳನ್ನು ಪೂರೈಸುವುದು ಪ್ರತಿಯೊಬ್ಬ ನಾಗರಿಕನ ಪ್ರಾಥಮಿಕ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಆಪರೇಷನ್ ಸಿಂಧೂರ್ ಸಮಯದಲ್ಲಿ, ಭಾರತ ಸದಾಚಾರವನ್ನು ಎತ್ತಿಹಿಡಿಯಿತು ಮಾತ್ರವಲ್ಲದೆ ಅನ್ಯಾಯದ ವಿರುದ್ಧ ಸೇಡು

ತೀರಿಸಿಕೊಂಡಿತು. ಭಗವಾನ್ ರಾಮನು ಜನರಿಗೆ ಸದಾಚಾರವನ್ನು ಎತ್ತಿಹಿಡಿಯಲು ಕಲಿಸುತ್ತಾನೆ ಮತ್ತು ಅನ್ಯಾಯದ ವಿರುದ್ಧ ಹೋರಾಡಲು ಧೈರ್ಯ ನೀಡುತ್ತಾನೆ ಎಂದು ಪ್ರಧಾನಿ ತಿಳಿಸಿದರು.

><><><><

೨೦೪೭ ರ ವೇಳೆಗೆ ವಿಕಸಿತ ಭಾರತದ ಗುರಿಯತ್ತ ದೇಶ ಮುನ್ನಡೆಯುತ್ತಿರುವ ಸಮಯದಲ್ಲಿ ರಾಷ್ಟ್ರದ ಬಾಹ್ಯ ಮತ್ತು ಆಂತರಿಕ ಭದ್ರತೆಯನ್ನು ಸಮತೋಲನದಲ್ಲಿಡುವುದು ಎಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಪೊಲೀಸ್ ಸಂಸ್ಮರಣಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಿಲಿಟರಿ ಮತ್ತು ಪೊಲೀಸರು ವಿಭಿನ್ನವಾಗಿದ್ದರೂ, ಅವರ ಧ್ಯೇಯ ರಾಷ್ಟ್ರವನ್ನು ಸುರಕ್ಷಿತವಾಗಿಡುವುದಾಗಿದೆ. ಸಶಸ್ತ್ರ ಪಡೆಗಳು ಮತ್ತು ಪೊಲೀಸ್ ಪಡೆಗಳು ರಾಷ್ಟ್ರೀಯ ಭದ್ರತೆಯ ಆಧಾರಸ್ತಂಭಗಳಾಗಿವೆ ಎಂದರು.

ಸಮಾಜದೊಳಗೆ ಹೊಸ ರೀತಿಯ ಅಪರಾಧ, ಭಯೋತ್ಪಾದನೆ ಮತ್ತು ಸೈದ್ಧಾಂತಿಕ ಯುದ್ಧಗಳು ಹೊರಹೊಮ್ಮುತ್ತಿವೆ. ಅಪರಾಧವು ಹೆಚ್ಚು ಸಂಘಟಿತ, ಮತ್ತು ಸಂಕೀರ್ಣವಾಗಿದೆ ಮತ್ತು ಸಮಾಜದಲ್ಲಿ ಅವ್ಯವಸ್ಥೆಯನ್ನು ಸೃಷ್ಟಿಸುವ ಜೊತೆಗೆ ರಾಷ್ಟ್ರದ ಸ್ಥಿರತೆಗೆ ಧಕ್ಕೆಯುಂಟು ಮಾಡುವುದು ಇದರ ಉದ್ದೇಶವಾಗಿದೆ ಎಂದು ಸಚಿವರು ತಿಳಿಸಿದರು. ಅಪರಾಧವನ್ನು ತಡೆಗಟ್ಟುವ ಜವಾಬ್ದಾರಿಯನ್ನು ನಿರ್ವಹಿಸುತ್ತಾ, ಸಮಾಜದಲ್ಲಿ ವಿಶ್ವಾಸವನ್ನು ಕಾಪಾಡಿಕೊಳ್ಳುವ ನೈತಿಕ ಕರ್ತವ್ಯವನ್ನು ಪೂರೈಸಿದ್ದಕ್ಕಾಗಿ ಸಚಿವರು ಪೊಲೀಸರನ್ನು ಶ್ಲಾಘಿಸಿದರು. ಪೊಲೀಸ್, ಸಿಆರ್‌ಪಿಎಫ್, ಬಿಎಸ್‌ಎಫ್ ಮತ್ತು ಸ್ಥಳೀಯ ಆಡಳಿತದ ಸಂಘಟಿತ ಪ್ರಯತ್ನಗಳು ಎಡಪಂಥೀಯ ಉಗ್ರವಾದ ಪೀಡಿತ ಪ್ರದೇಶಗಳಲ್ಲಿ ಸಮಸ್ಯೆ ಉಲ್ಬಣಗೊಳ್ಳದಂತೆ ನೋಡಿಕೊಳ್ಳಲು ಸಹಾಯ ಮಾಡಿದೆ ಎಂದು ಸಚಿವ ರಾಜನಾಥ್ ಸಿಂಗ್ ಹೇಳಿದರು.

ಧ್ವನಿ : ರಾಜನಾಥ್ ಸಿಂಗ್ - ೧೪ ಸೇಕೆಂಡ್

ಈ ಸಂದರ್ಭದಲ್ಲಿ ಗುಪ್ತಚರ ಸಂಸ್ಥೆ ನಿರ್ದೇಶಕ ತಪನ್ ದೇಕಾ, ಕಳೆದ ವರ್ಷದಲ್ಲಿ ೧೯೧ ಪೊಲೀಸ್ ಸಿಬ್ಬಂದಿ ಕರ್ತವ್ಯದ ಸಮಯದಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯದ ನಂತರ ಒಟ್ಟು ೩೬ ಸಾವಿರ ೬೮೪ ಪೊಲೀಸ್ ಸಿಬ್ಬಂದಿ ಕರ್ತವ್ಯದ ಸಾಲಿನಲ್ಲಿ ಅತ್ಯುನ್ನತ ತ್ಯಾಗ ಮಾಡಿದ್ದಾರೆ

ಎಂದು ಅವರು ಹೇಳಿದರು.ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್, ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

><><><><

ಬಿಹಾರ್‌ನಲ್ಲಿ ಎರಡನೇ ಮತ್ತು ಅಂತಿಮ ಹಂತದ ವಿಧಾನಸಭಾ ಚುನಾವಣೆಯ ನಾಮಪತ್ರಗಳ ಪರಿಶೀಲನೆ ಇಂದು ಮುಕ್ತಾಯಗೊಂಡಿದೆ. ಅಭ್ಯರ್ಥಿಗಳು ಇದೇ ೨೩ ರೊಳಗೆ ತಮ್ಮ ನಾಮಪತ್ರಗಳನ್ನು ಹಿಂಪಡೆಯಬಹುದಾಗಿದೆ. ೨೦ ಜಿಲ್ಲೆಗಳಲ್ಲಿರುವ ೧೨೨ ಕ್ಷೇತ್ರಗಳಿಗೆ ೨ ಸಾವಿರದ ೬೦೦ ಕ್ಕೂ ಹೆಚ್ಚು ನಾಮಪತ್ರಗಳು ಸಲ್ಲಿಕೆಯಾಗಿವೆ. ಎರಡನೇ ಹಂತದ ಮತದಾನ ನವೆಂಬರ್ ೧೧ ರಂದು ನಡೆಯಲಿದ್ದು, ಮೊದಲ ಹಂತದ ಮತದಾನ ೬ ರಂದು ನಡೆಯಲಿದೆ.

><><><><

ಜಿಎಸ್‌ಟಿ ಸುಧಾರಣೆಗಳು ಮತ್ತು ಹೆಚ್ಚಿನ ಗ್ರಾಹಕರ ಬೇಡಿಕೆಯಿಂದಾಗಿ ಭಾರತದಲ್ಲಿ ದೀಪಾವಳಿಯ ಮಾರಾಟ ಮೌಲ್ಯ ದೇಶಾದ್ಯಂತ ಸರಕುಗಳಲ್ಲಿ ೫ ಲಕ್ಷ ೪೦ ಸಾವಿರ ಕೋಟಿ ರೂಪಾಯಿ ಮತ್ತು ಸೇವೆಗಳಲ್ಲಿ ಸುಮಾರು ೬೫ ಸಾವಿರ ಕೋಟಿ ರೂಪಾಯಿಗಳನ್ನು ತಲುಪಿದೆ. ಇದು ದೇಶದ ಹಬ್ಬದ ಋತುವಿನ ಚಿಲ್ಲರೆ ಮತ್ತು ವ್ಯಾಪಾರ ಇತಿಹಾಸದಲ್ಲಿ ಇದುವರೆಗಿನ ಅತ್ಯಧಿಕ ವಹಿವಾಟನ್ನು ಸೂಚಿಸುತ್ತದೆ. ೨೦೨೪ ರ ನವರಾತ್ರಿಯಿಂದ ದೀಪಾವಳಿ ಅವಧಿಯವರೆಗಿನ ಹಬ್ಬದ ಮಾರಾಟ ಈ ಬಾರಿ ಶೇಕಡಾ ೨೫ ರಷ್ಟು ಹೆಚ್ಚಳವಾಗಿದೆ ಎಂದು ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ ಸಿಎಐಟಿ ಯ ಸಂಶೋಧನೆ ಮತ್ತು ವ್ಯಾಪಾರ ಅಭಿವೃದ್ಧಿ ಸಂಘ ತಿಳಿಸಿದೆ. ಸಿಹಿತಿಂಡಿ ಗೃಹಾಲಂಕಾರ, ಪಾದರಕ್ಷೆಗಳು ಸಿದ್ಧ ಉಡುಪುಗಳು, ಬಾಳಿಕೆ ಬರುವ ವಸ್ತುಗಳು ಮತ್ತು ದೈನಂದಿನ ಬಳಕೆಯ ವಸ್ತುಗಳಂತಹ ಪ್ರಮುಖ ಗ್ರಾಹಕ ಮತ್ತು ಚಿಲ್ಲರೆ ವಿಭಾಗಗಳಲ್ಲಿ ಜಿಎಸ್‌ಟಿ ದರಗಳಲ್ಲಿನ ಕಡಿತ, ಬೆಲೆ ಸ್ಪರ್ಧಾತ್ಮಕತೆಯನ್ನು ಗಮನಾರ್ಹವಾಗಿ ಸುಧಾರಿಸಿ, ಗ್ರಾಹಕ ಖರೀದಿಯನ್ನು ಹೆಚ್ಚಿಸಿದೆ ಎಂದು ವರದಿ ತಿಳಿಸಿದೆ.

><><><><

ದೀಪಾವಳಿಯ ಸಂದರ್ಭದಲ್ಲಿ ಮುಂಬೈ ಷೇರು ಮಾರುಕಟ್ಟೆ - ಬಿಎಸ್‌ಇ ಮತ್ತು ರಾಷ್ಟ್ರೀಯ ಷೇರು ಮಾರುಕಟ್ಟೆ ಎನ್‌ಎಸ್‌ಇ ಮುಹೂರ್ತ ವಹಿವಾಟನ್ನು ನಡೆಸಿದವು.  ಇದು ೨೦೮೨ ರ ಹೊಸ ಸಂವತ್ಸರದ ಆರಂಭವನ್ನು ಸೂಚಿಸುತ್ತದೆ. ಎರಡೂ ಸೂಚ್ಯಂಕಗಳು ಇಂದಿನ ವಿಶೇಷ ವಹಿವಾಟಿನ ಅವಧಿಯನ್ನು ಅಲ್ಪ ಲಾಭದೊಂದಿಗೆ ಕೊನೆಗೊಳಿಸಿದವು. ಸೆನ್ಸೆಕ್ಸ್ ೬೩ ಅಂಕಗಳ ಏರಿಕೆಯೊಂದಿಗೆ ೮೪ ಸಾವಿರ ೪೨೬ ರಲ್ಲಿ ಕೊನೆಗೊಂಡರೆ, ನಿಫ್ಟಿ ೨೫ ಅಂಕಗಳನ್ನು ಸೇರಿಸಿ ೨೫ ಸಾವಿರ ೮೬೮ ರಲ್ಲಿ ಸ್ಥಿರವಾಯಿತು.

><><><><

ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ ರೈತರು ನಾವೀನ್ಯತೆ ಮತ್ತು ಶುದ್ಧ ಇಂಧನವನ್ನು ಅಳವಡಿಸಿಕೊಳ್ಳುತ್ತಿದ್ದಾರೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.  ಸಮಾಜಿಕ ಮಾಧ್ಯಮ ಸಂದೇಶದಲ್ಲಿ ಸಚಿವರು, ಕೃಷಿಕರೊಬ್ಬರು ತಮ್ಮ ಜಮೀನಿನಲ್ಲಿ ಸೌರಶಕ್ತಿಯ ಮೂಲಕ ೨೫ ಸಾವಿರ ಯೂನಿಟ್ ವಿದ್ಯುತ್ ಉತ್ಪಾದಿಸುವ ಮತ್ತು ಸೌರಫಲಕಗಳ ಅಡಿಯಲ್ಲಿ ಬೆಳೆಗಳನ್ನು ಬೆಳೆದ ಕುರಿತ ಯಶೋಗಾಥೆಯನ್ನು ಹಂಚಿಕೊಂಡರು. ಇದೇ ವೇಳೆ ಅವರು, ಸೌರಫಲಕಗಳಿಂದ ಪ್ರತಿದಿನ ೨೫ ಸಾವಿರ ಯೂನಿಟ್ ವಿದ್ಯುತ್ ಉತ್ಪಾದಿಸಲಾಗುತ್ತದೆ, ಪಲಕ ಅಳವಡಿಸುವ  ಅದೇ ಹೊಲಗಳಲ್ಲಿ ಬೆಳೆಗಳು ಬೆಳೆಯುತ್ತವೆ - ಭಾರತದ ರೈತರು ನಾವೀನ್ಯತೆ ಮತ್ತು ಶುದ್ಧ ಶಕ್ತಿಯನ್ನು ಹೇಗೆ ಅಳವಡಿಸಿಕೊಳ್ಳುತ್ತಿದ್ದಾರೆ ಎಂಬುದಕ್ಕೆ ಇದು ಒಂದು ಉಜ್ವಲ ಉದಾಹರಣೆಯಾಗಿದೆ ಎಂದು ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ.  ಇದಕ್ಕೂ ಮೊದಲು, ಈ ವರ್ಷದ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಭಾರತ ದಾಖಲೆಯ ೨೫ ಗಿಗಾವ್ಯಾಟ್ ನವೀಕರಿಸಬಹುದಾದ ಸಾಮರ್ಥ್ಯವನ್ನು ಸೇರಿಸಿದೆ ಮತ್ತು ಸರಿಸುಮಾರು ೧೨೫ ಗಿಗಾವ್ಯಾಟ್ ಸೌರ ಸಾಮರ್ಥ್ಯದೊಂದಿಗೆ, ಭಾರತವು ಈಗ ವಿಶ್ವದ ಮೂರನೇ ಅತಿದೊಡ್ಡ ಸೌರ ಉತ್ಪಾದಕ ರಾಷ್ಟ್ರವಾಗಿದೆ ಎಂದು ಸಚಿವರು ಹೇಳಿದರು.

><><><><

ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿ ತಕೈಚಿ ಸನೇ ಆಯ್ಕೆಯಾಗಿದ್ದು, ಇದು ಜಪಾನ್ ರಾಜಕೀಯದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಮೇಲ್ಮನೆಯಲ್ಲಿ ಗೆಲುವಿಗೆ ಅಗತ್ಯವಾದ ಸರಳ

ಬಹುಮತಕ್ಕಿಂತ ಕೇವಲ ಒಂದು ಹೆಚ್ಚಿನ ಮತದೊಂದಿಗೆ ಅವರಿಗೆ ೧೨೫ ಮತಗಳು ದೊರೆತರೆ, ಕೆಳಮನೆಯಲ್ಲಿ ಅವರಿಗೆ ಬಹುಮತದೊಂದಿಗೆ ಒಟ್ಟು ೨೩೭ ಮತಗಳು ದೊರೆತವು, ದೀರ್ಘಕಾಲದ ಮಿತ್ರ ಕೊಮ್ಮೈಟೊ ಅವರಿಂದ ಎಲ್‌ಡಿಪಿ ಬೇರ್ಪಟ್ಟ ನಂತರ, ಲಿಬರಲ್ ಡೆಮಾಕ್ರಟಿಕ್ ಪಕ್ಷ - ಎಲ್‌ಡಿಪಿಯ ನಾಯಕಿ ತಕೈಚಿ ಅವರು ಜಪಾನ್ ಇನ್ನೋವೇಶನ್ ಪಾರ್ಟಿ-ಜೆಐಪಿಯೊಂದಿಗೆ ಹೊಸ ಸಮ್ಮಿಶ್ರ ಸರ್ಕಾರವನ್ನು ರಚಿಸಲಿದ್ದಾರೆ. ಜಪಾನ್ ದೊರೆಯಿಂದ ನೇಮಕಗೊಂಡ ನಂತರ ೬೪ ವರ್ಷದ ತಕೈಚಿ ಇಂದು ಔಪಚಾರಿಕವಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ, ಜಪಾನ್‌ನ ಪ್ರಧಾನಿಯಾಗಿ ಆಯ್ಕೆಯಾದ ತಕೈಚಿ ಸನೇ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಭಾರತ-ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಅವರೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ತಿಳಿಸಿದ್ದಾರೆ. ಇಂಡೋ-ಪೆಸಿಫಿಕ್ ಮತ್ತು ಅದರಾಚೆಗೆ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ಎರಡು ರಾಷ್ಟ್ರಗಳ ನಡುವೆ ಬಲವಾದ ಸಂಬಂಧಗಳು ಅತ್ಯಗತ್ಯ ಎಂದು ಅವರು ಹೇಳಿದ್ದಾರೆ. ಜಪಾನ್‌ನ ವಿದೇಶಾಂಗ ಸಚಿವರಾಗಿ ನೇಮಕಗೊಂಡಿದ್ದಕ್ಕಾಗಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ಮೊಟೆಗಿ ತೋಶಿಮಿಟ್ಸು ಅವರನ್ನು ಅಭಿನಂದಿಸಿದ್ದಾರೆ.

><><><><

೨೦೦೭ ರ ಚುನಾವಣಾ ಪ್ರಚಾರಕ್ಕೆ ಹಣಕಾಸು ಒದಗಿಸಲು ಲಿಬಿಯಾದ ಸರ್ವಾಧಿಕಾರಿ ಮುಹಮ್ಮರ್ ಗದ್ದಾಫಿಯಿಂದ ಹಣವನ್ನು ಬಳಸಿದ್ದಕ್ಕಾಗಿ ಮಾಜಿ ಫ್ರಾನ್ಸ್ ಅಧ್ಯಕ್ಷ ನಿಕೋಲಸ್ ಸರ್ಕೋಜಿ ಐದು ವರ್ಷಗಳ ಜೈಲು ಶಿಕ್ಷೆಯನ್ನು ಅನುಭವಿಸಲಿದ್ದಾರೆ. ಆ ಮೂಲಕ ಅವರು ಎರಡನೇ ಮಹಾಯುದ್ಧದ ನಂತರ ಜೈಲು ಶಿಕ್ಷೆ ಅನುಭವಿಸಿದ ಮೊದಲ ಮಾಜಿ ನಾಯಕರಾಗಿದ್ದಾರೆ. ಆದಾಗ್ಯೂ, ಸರ್ಕೋಜಿ, ತಾವು ತಪ್ಪಿತಸ್ಥರಲ್ಲ ಎಂದು ವಾದಿಸಿದ್ದು, ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೆ. ಸುರಕ್ಷತೆಗಾಗಿ ಅವರನ್ನು ಲಾ ಸ್ಯಾಂಟೆ ಜೈಲಿನಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ.

><><><><

ಭಾರತೀಯ ರೈಲ್ವೆಯ ಬೆಂಗಳೂರು ವಿಭಾಗ ಮಾಹಿತಿ ತಂತ್ರಜ್ಞಾನ ಆಧರಿತ ಪ್ರೈಮ್ ವ್ಯವಸ್ಥೆಯನ್ನು ಬಳಸಿ, ಹಬ್ಬದ ವಿಶೇಷ ಪ್ರಯಾಣಿಕ ಸಂದಣಿಯನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ಹಬ್ಬದ ಸಂದರ್ಭಗಳಲ್ಲಿ ಒಂದು ಲಕ್ಷ ೨೦ ಸಾವಿರಕ್ಕೂ ಅಧಿಕ ಪ್ರಯಾಣಿಕರನ್ನು ನಿಗದಿತ ತಾಣಗಳಿಗೆ ಸುರಕ್ಷಿತವಾಗಿ ಕಳುಹಿಸಲಾಗಿದೆ. ನಿನ್ನೆ ಒಂದೇ ದಿನ ೩೧೬ ರೈಲುಗಳು ಕಾರ್ಯಾಚರಣೆ ಮಾಡಿದ್ದು, ವಿಭಾಗದ ಇತಿಹಾಸದಲ್ಲೇ ಅತ್ಯಧಿಕ ಸಂಖ್ಯೆಯ ಪ್ರಯಾಣಿಕರನ್ನು ಮಾಹಿತಿ ತಂತ್ರಜ್ಞಾನ, ಸಿಸಿಟಿವಿ ಬಳಸಿ, ಜನಸಂದಣಿಯಾಗದಂತೆ ಹಂತ ಹಂತವಾಗಿ ನಿರ್ವಹಿಸಲಾಗಿದೆ ಎಂದು ವಿಭಾಗೀಯ ವಾಣಿಜ್ಯ ಪ್ರಬಂಧಕರಾದ ನಿವೇದಿತಾ ಬಾಲರೆಡ್ಡಿಯವರ್ ತಿಳಿಸಿದ್ದಾರೆ.

><><><><

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಲ್ಕು ದಿನಗಳ ಕೇರಳ ಭೇಟಿಗಾಗಿ ಇಂದು ತಿರುವನಂತಪುರಂಗೆ ತೆರಳಲಿದ್ದಾರೆ. ನಾಳೆ ರಾಷ್ಟ್ರಪತಿಗಳು ಶಬರಿಮಲೆ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಿದ್ದಾರೆ. ನಾಡಿದ್ದು ಅವರು, ತಿರುವನಂತಪುರಂನ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದು, ನಾರಾಯಣ ಗುರು ಸಮಾಧಿಯ ಶತಮಾನೋತ್ಸವ ಸಮಾರಂಭದಲ್ಲಿಯೂ ಭಾಗವಹಿಸಲಿದ್ದಾರೆ. ಇದರ ಜೊತೆಗೆ ರಾಷ್ಟ್ರಪತಿ, ಪಾಲಾದಲ್ಲಿ ಸೇಂಟ್ ಥಾಮಸ್ ಕಾಲೇಜು ಮತ್ತು ಎರ್ನಾಕುಲಂನಲ್ಲಿ ಸೇಂಟ್ ತೆರೇಸಾ ಕಾಲೇಜಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

><><><><

ಗುಜರಾತ್ ಮತ್ತು ಹರಿಯಾಣದ ಗ್ರಾಮೀಣ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ೧೫ ನೇ ಹಣಕಾಸು ಆಯೋಗದ ಅಡಿಯಲ್ಲಿ ಕೇಂದ್ರ ಸರ್ಕಾರ ೭೩೦ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿದೆ. ೨೦೨೪-೨೫ನೇ ಸಾಲಿಗೆ ಗುಜರಾತ್ ಸುಮಾರು ೫೨೨ ಕೋಟಿ ರೂಪಾಯಿಗಳನ್ನು ಸಂಯುಕ್ತ ಅನುದಾನಗಳ ಎರಡನೇ ಕಂತಾಗಿ ಪಡೆಯಲಿದೆ ಎಂದು ಪಂಚಾಯತ್ ರಾಜ್ ಸಚಿವಾಲಯ ತಿಳಿಸಿದೆ. ಇನ್ನು ೨೦೨೫-೨೬ರ ಹಣಕಾಸು ವರ್ಷಕ್ಕೆ ಹರಿಯಾಣ, ಮೊದಲ ಕಂತಿನಲ್ಲಿ ೧೯೫ ಕೋಟಿ ರೂಪಾಯಿಗಳನ್ನು ಪಡೆಯಲಿದೆ. ಈ ಅನುದಾನಗಳನ್ನು ನೈರ್ಮಲ್ಯ, ಮನೆಯ ತ್ಯಾಜ್ಯ ಸಂಸ್ಕರಣೆ, ಕುಡಿಯುವ ನೀರಿನ ಪೂರೈಕೆ ಮತ್ತು ಬಯಲು ಶೌಚ ಮುಕ್ತ ಸ್ಥಿತಿಯ ನಿರ್ವಹಣೆಯಂತಹ ಮೂಲಭೂತ ಸೇವೆಗಳಿಗೆ ಬಳಸಿಕೊಳ್ಳಲಾಗುವುದು ಎಂದು ಸಚಿವಾಲಯ ತಿಳಿಸಿದೆ.

><><><><

ಫಿಡೆ ಚೆಸ್ ವಿಶ್ವಕಪ್ ೨೦೨೫ ರ ಅಧಿಕೃತ ಲಾಂಛನ ಮತ್ತು ಗೀತೆಯನ್ನು ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್ ಇಂದು ಬಿಡುಗಡೆ ಮಾಡಿದರು. ಜನಪ್ರಿಯ ಗಾಯಕ ದಲೇರ್ ಮೆಹಂದಿ ಹಾಡಿದ ಅಧಿಕೃತ ಗೀತೆ ಮತ್ತು ಗೋವಾ ಸಂಸ್ಕೃತಿ ಮತ್ತು ಚೆಸ್ ಆಟದಿಂದ ಪ್ರೇರಿತ ಲಾಂಛನವನ್ನು ಗೋವದಲ್ಲಿ ನಡೆದ ಸಮಾರಂಭದಲ್ಲಿ ಅನಾವರಣಗೊಳಿಸಲಾಯಿತು. ವಿದ್ಯಾರ್ಥಿಗಳಲ್ಲಿ ಗಮನ, ಚಿಂತನೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಚೆಸ್‌ನ ಮಹತ್ವವನ್ನು ಒತ್ತಿ ಹೇಳಿದ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ರಾಜ್ಯದಾದ್ಯಂತ ಶಾಲೆಗಳು ಮತ್ತು ಕಾಲೇಜುಗಳು, ವಿದ್ಯಾರ್ಥಿಗಳ ಕಲಿಕೆಯ ಭಾಗವಾಗಿ ಚೆಸ್ ಅನ್ನು ಪರಿಚಯಿಸುವಂತೆ ಕರೆ ನೀಡಿದರು. ಫಿಡೆ ಚೆಸ್ ವಿಶ್ವಕಪ್ ಗೋವಾದಲ್ಲಿ ಇದೇ ೩೧ ರಿಂದ ನವೆಂಬರ್ ೧೭ ರವರೆಗೆ ನಡೆಯಲಿದೆ, ೨೩ ವರ್ಷಗಳನಂತರ ಈ ಕಾರ್ಯಕ್ರಮದಲ್ಲಿ ೮೨ ದೇಶಗಳನ್ನು ಪ್ರತಿನಿಧಿಸುವ ೨೦೬ ಆಟಗಾರರು ಭಾಗವಹಿಸಲಿದ್ದಾರೆ. ಒಟ್ಟು ೨ ದಶಲಕ್ಷ ಡಾಲರ್ ಮೌಲ್ಯದ ಬಹುಮಾನಗಳನ್ನು ವಿಜೇತರಿಗೆ ನೀಡಲಾಗುವುದು. ಡಿ.ಗುಕೇಶ್, ಅರ್ಜುನ್ ಎರಿಗೈಸಿ, ಅನೀಶ್ ಗಿರಿ, ವೆಸ್ಲಿ ಸೋ, ವಿನ್ಸೆಂಟ್ ಕೀಮರ್, ಹ್ಯಾನ್ಸ್ ನೀಮನ್ ಮತ್ತು ಫೌಸ್ಟಿನೋ ಓರೊ ಸೇರಿದಂತೆ ಖ್ಯಾತ ಚೆಸ್ ಆಟಗಾರರು ಪಂದ್ಯಾವಳಿಯಲ್ಲಿ ಸ್ಪರ್ಧಿಸಲಿದ್ದಾರೆ.

><><>END<><><